


**ರಾಮಮನೋಹರ ಲೋಹಿಯಾ ಜೀವನಯಾನ**

■ ನಟರಾಜ್ ಹುಳಿಯಾರ್
ಕಲೆ: ಎಚ್.ಎಸ್. ಮೋನಪ್ಪ

# ನೂರು ವರ್ಷಗಳ ಹೋರಾಟ: ಏಳು ವರ್ಷಗಳಲ್ಲಿ ಅಧಿಕಾರ!

‘ಇಪ್ಪತ್ತನೆಯ ಶತಮಾನ ಒಳಿತನ್ನು ಮಾಡಲು ಸಂಘಟಿತ ಪ್ರಯತ್ನಗಳು ಶುರುವಾದ ಶತಮಾನ.’

ಈ ಮಾತನ್ನು ಹೇಳಿದ ಲೋಹಿಯಾ ಎದುರು ಯುಗದ ತುಡಿತಕ್ಕೆ ತಕ್ಕಂತೆ ಸಮಾಜವಾದಿ ರಾಜಕಾರಣವನ್ನು, ಪಕ್ಷವನ್ನು ರೂಪಿಸುವ ಗುರಿಯಿತ್ತು.

ಲೋಹಿಯಾ ಹಾಗೂ ಭಾರತದ ಹಲವು ಜವಾಬ್ದಾರಿಯುತ ನಾಯಕ, ನಾಯಕಿಯರ ಪಾಲಿಗೆ ಸ್ವಾತಂತ್ರ್ಯ ಚಳುವಳಿ 1947ಕ್ಕೇ ಮುಗಿಯಲಿಲ್ಲ! ಸ್ವಾತಂತ್ರ್ಯಪೂರ್ವದಲ್ಲಿ ಶುರುವಾದ ಸಾಮಾಜಿಕ ಹೋರಾಟಗಳು ಸ್ವತಂತ್ರ ಭಾರತದಲ್ಲೂ ಮುಂದುವರಿದಿದ್ದವು. ಯಾವ ಕಾಶಿಯಲ್ಲಿ ಬಾಬೂ ರಾಜೇಂದ್ರ ಪ್ರಸಾದರು ಬ್ರಾಹ್ಮಣರ ಕಾಲು ತೊಳೆದರೋ, ಅದೇ ಕಾಶಿಯಲ್ಲಿದ್ದ ವಿಶ್ವನಾಥ ದೇವಾಲಯಕ್ಕೆ ದಲಿತರಿಗೆ ಪ್ರವೇಶವಿರಲಿಲ್ಲ. ಸಮಾಜವಾದಿ ಪಕ್ಷ ದಲಿತರ ದೇವಾಲಯ ಪ್ರವೇಶ ಹೋರಾಟಕ್ಕಿಳಿಯಿತು.

ಅಸ್ಪೃಶ್ಯತಾ ನಿವಾರಣಾ ಕಾನೂನು 1955ರಲ್ಲೇ ಜಾರಿಗೆ ಬಂದಿತ್ತು. ಆದರೂ ದಲಿತರು ವಿಶ್ವನಾಥ ಮಂದಿರ ಪ್ರವೇಶಿಸಲು ಬಂದಾಗಲೆಲ್ಲ ಸವರ್ಣೀಯರು ತಡೆಯೊಡ್ಡುವುದು, ಹಲ್ಲೆ ಮಾಡುವುದು ಮುಂದುವರಿದಿತ್ತು. ಸಮಾಜವಾದಿ ಪಕ್ಷ ‘ಬನಾರಸ್ ಹರಿಜನರ ಮಂದಿರ ಪ್ರವೇಶ ಸಮಿತಿ’ ರಚಿಸಿತು. ದಲಿತರ ದೇವಾಲಯ ಪ್ರವೇಶದಲ್ಲಿ ಭಾಗಿಯಾಯಿತು. ಸವರ್ಣೀಯರು ಸಮಾಜವಾದಿ ಪಕ್ಷದ ರಾಜ್‌ನಾರಾಯಣ್ ಸಿಂಗರ ಗಡ್ಡ ಎಳೆದು ಅವಮಾನ ಮಾಡಿದರು. ರಾಜ್‌ನಾರಾಯಣ್ ಹಾಗೂ ಸಂಗಾತಿಗಳು ಉಪವಾಸ ಸತ್ಯಾಗ್ರಹ ಮಾಡಲು ಮುಂದಾದರು.

ಸತ್ಯಾಗ್ರಹದ ಬಗ್ಗೆ ಲೋಹಿಯಾಗೆ ಅಷ್ಟು ಒಲವಿರಲಿಲ್ಲ. ‘ಸತ್ಯಾಗ್ರಹ ಸಾರ್ವಜನಿಕ ಉದ್ದೇಶಕ್ಕಾಗಿ, ಸೆರೆಮನೆಯ ಹೊರಗೆ, ಬಹಿರಂಗವಾಗಿ ನಡೆದರೆ, ಅದರಿಂದಾಗಿ

